Akashvani : Bangalore

National Bulletin

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

30.03.2024 19.35 hrs

<><*<><>*><>

<u>ಮುಖ್ಯಾಂಶಗಳು</u>

- ಲೋಕಸಭಾ ಚುನಾವಣೆ; ಮೊದಲ ಹಂತದ ಚುನಾವಣೆಗೆ ಕಣ ಸಜ್ಜು
- ರಾಷ್ಟ್ರಪತಿ ಅವರಿಂದ ನಾಲ್ವರು ಗಣ್ಯರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರದಾನ
- ವಿವಿಧ ರಾಜಕೀಯ ಪಕ್ಷಗಳಿಂದ ಅಭ್ಯರ್ಥಿ ಪಟ್ಟಿ ಘೋಷಣೆ; ರೋಡ್ ಶೋ, ರ್‍ಯಾಲಿ ಆಯೋಜನೆ
- ಬಿಜೆಪಿ ಯಿಂದ ಚುನಾವಣಾ ಪ್ರಣಾಳಿಕೆ ಸಮಿತಿ ಪ್ರಕಟ
- ಐಪಿಎಲ್ ಟಿ-೨೦ ಕ್ರಿಕೆಟ್; ಲಖನೌ ಸೂಪರ್ ಜೈಂಟ್ಸ್ ಮತ್ತು ಪಂಜಾಬ್ ಕಿಂಗ್ಸ್ ಮುಖಾಮುಖಿ

<><*<><>*><>

ಲೋಕಸಭೆಯ ಮೊದಲ ಹಂತದ ಚುನಾವಣೆಗೆ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾದ ಇಂದು ಕಣದಲ್ಲಿರುವ ಅಭ್ಯರ್ಥಿಗಳ ಬಗ್ಗೆ ವಿವಿಧ ಕಡೆಗಳಿಂದ ವರದಿಗಳು ಬರುತ್ತಿವೆ. ಮೊದಲ ಹಂತದಲ್ಲಿ ೨೧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ೧೦೨ ಲೋಕಸಭಾ ಕ್ಷೇತ್ರಗಳಲ್ಲಿ ಏಪ್ರಿಲ್ ೧೯ ರಂದು ಮತದಾನ ನಿಗದಿಯಾಗಿದೆ.

<><*<><>*><>

ಉತ್ತರಾಖಂಡದ ಐದು ಲೋಕಸಭಾ ಕ್ಷೇತ್ರಗಳಲ್ಲಿ ಒಟ್ಟು ೫೫ ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ. ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾದ ಇಂದು ಓರ್ವ ಸ್ವತಂತ್ರ ಅಭ್ಯರ್ಥಿ ನಾಮಪತ್ರ ಹಿಂತೆಗೆದುಕೊಂಡಿದ್ದಾರೆ. ಒಟ್ಟು ೬೩ ನಾಮಪತ್ರಗಳು ಬಂದಿದ್ದು, ೫೬ ನಾಮಪತ್ರಗಳು ಸರಿಯಾಗಿವೆ.

<><*<><>*><>

ಮಣಿಪುರದ ಎರಡು ಲೋಕಸಭಾ ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಕಾರ್ಯ ಇಂದು ಪೂರ್ಣಗೊಂಡಿತು. ಒಟ್ಟು ಹತ್ತು ನಾಮಪತ್ರಗಳನ್ನು ಸ್ವೀಕರಿಸಲಾಗಿದ್ದು, ಒಂದು ನಾಮಪತ್ರ ತಿರಸ್ಕೃತವಾಗಿದೆ.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ದೇಶದ ಅತ್ಯುನ್ನತ ನಾಗರಿಕ ಗೌರವ ಭಾರತ ರತ್ನ ಪ್ರಶಸ್ತಿಗಳನ್ನು ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಿದರು. ದೇಶಕ್ಕಾಗಿ ಗಣನೀಯ ಸೇವೆ ಸಲ್ಲಿಸಿದ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಮತ್ತು ಚೌಧರಿ ಚರಣ ಸಿಂಗ್, ಕೃಷಿ ವಿಜ್ಞಾನಿ ಎಂ.ಎಸ್.ಸ್ವಾಮಿನಾಥನ್ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ಮರಣೋತ್ತರವಾಗಿ ಈ ಗೌರವಗಳನ್ನು ಪ್ರದಾನ ಮಾಡಲಾಯಿತು. ದೇಶದ ಮಾಜಿ ಉಪಪ್ರಧಾನಿ ಹಾಗೂ ಹಿರಿಯ ಬಿಜೆಪಿ ಧುರೀಣ ಎಲ್.ಕೆ.ಅಡ್ವಾಣಿ ಅವರಿಗೆ ಈ ಗೌರವನ್ನು ನಾಳೆ ಪ್ರದಾನ ಮಾಡಲಾಗುವುದು. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪುರಸ್ಕೃತರ ಸಂಬಂಧಿಗಳು ಸ್ವೀಕರಿಸಿದರು. ಸಮಾರಂಭದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ.ಎಸ್.ಜೈಶಂಕರ್, ಬಿಹಾರ್ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

<><*<><>*><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಭಾರತ ರತ್ನ ಪುರಸ್ಕೃತ ಗಣ್ಯರ ಸೇವೆಯನ್ನು ಕೊಂಡಾಡಿದ್ದಾರೆ. ಪಿ.ವಿ.ನರಸಿಂಹರಾವ್ ಅವರು, ದೇಶದ ಪ್ರಗತಿ ಹಾಗೂ ಆಧುನೀಕರಣಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಚೌಧರಿ ಚರಣ್ ಸಿಂಗ್ ಅವರು, ದೇಶದ ಅಭಿವೃದ್ಧಿಗೆ, ಅದರಲ್ಲೂ ವಿಶೇಷವಾಗಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಶ್ರಮಿಸಿದ್ದರು. ಡಾ.ಎಂ.ಎಸ್.ಸ್ವಾಮಿನಾಥನ್ ಅವರು ಆಹಾರ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಹೊಂದಲು ಕೊಡುಗೆ ನೀಡಿದ್ದಾರೆ. ಬಿಹಾರದ ಕರ್ಪೂರಿ ಠಾಕೂರ್ ಅವರು ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಾಗಿ ಹೋರಾಡಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಸ್ಮರಿಸಿದ್ದಾರೆ.

<><*<><>*><>

೧೮ನೇ ಲೋಕಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು ನಡೆಯಲಿರುವ ಸಾರ್ವತ್ರಿಕ ಚುನಾವಣೆಗೆ ಭಾರತ ಚುನಾವಣಾ ಆಯೋಗ, ಸಕಲ ಸಿದ್ಧತೆಯೊಂದಿಗೆ ಸಜ್ಜಾಗಿದೆ.  ದೇಶದಲ್ಲಿ ಚುನಾವಣೆಗಳನ್ನು ಪಾರದರ್ಶಕವಾಗಿ ಹಾಗೂ ಅತ್ಯಂತ ವಿಶ್ವಾಸಾರ್ಹ ರೀತಿಯಲ್ಲಿ ನಡೆಸುವ ಸಂಕಲ್ಪದೊಂದಿಗೆ ಚುನಾವಣಾ ಆಯೋಗ, ಸಮಸ್ತ ಚುನಾವಣಾ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ತಂತ್ರಜ್ಞಾನದ ನೆರವನ್ನು ಬಳಸಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಮತದಾರರು, ಚುನಾವಣಾ ಸಿಬ್ಬಂದಿ ಹಾಗೂ ಆಯೋಗಕ್ಕೆ ನೆರವಾಗುವ ಹಲವು ಆಪ್‌ಗಳನ್ನು ಚುನಾವಣಾ ಆಯೋಗ ಅಭಿವೃದ್ಧಿಪಡಿಸಿದೆ.  ಈ ಪೈಕಿ ಇಂದು ವೋಟರ್ ಹೆಲ್ಪ್ ಲೈನ್ ಆಪ್ ಅಥವಾ ಮತದಾರರ ಸಹಾಯವಾಣಿ ಆಪ್ ಬಗ್ಗೆ ಒಂದಷ್ಟು ಮಾಹಿತಿ.

**************

ಮತದಾರರ ಅನುಕೂಲಕ್ಕಾಗಿ ಕಲ್ಪಿಸಲಾಗಿರುವ ಹಲವು ಸೇವೆಗಳ ಪೈಕಿ ಮತದಾರರ ಸಹಾಯವಾಣಿ ಆಪ್ ಕ್ರಾಂತಿಕಾರಕ ವಿಧಾನವಾಗಿದೆ. ಪ್ರಸ್ತುತ ದೇಶದಲ್ಲಿ ಮತದಾನದ ಹಕ್ಕನ್ನು ೧೮ ವರ್ಷ ತುಂಬಿದ ವ್ಯಕ್ತಿಗಳಿಗೆ ನೀಡಲಾಗುತ್ತಿದೆ. ಮೊದಲ ಬಾರಿಗೆ ಮತದಾನ ಮಾಡುವ ನವಮತದಾರರಿಗೆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸುವುದು, ಮತದಾರರ ಪಟ್ಟಿಯಲ್ಲಿ ಈಗಾಗಲೇ ಹೆಸರು ಇರುವವರು ಕಾಲಕಾಲಕ್ಕೆ ಅಗತ್ಯವಿರುವಂತೆ ಕೆಲವು ವಿವರಗಳನ್ನು ಬದಲಾಯಿಸುವುದು, ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರನ್ನು ಹುಡುಕುವುದು ಹಾಗೂ ಲಭ್ಯವಿರುವ ಇತರ ಚುನವಾಣಾ ಸಂಬಂಧೀ ಸೇವೆಗಳ ಬಗ್ಗೆ ಮಾಹಿತಿ ಪಡೆಯುವುದಕ್ಕೆ ಮತದಾರರ ಸಹಾಯವಾಣಿ ಆಪ್ ನೆರವಾಗಲಿದೆ. ಇದುವರೆಗೆ ಅಂದಾಜು ಒಂದು ಕೋಟಿ ೬ ಲಕ್ಷ ಮತದಾರರು ಈ ಆಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಿದ್ದಾರೆ. ಇಂತಹ ಜನಸ್ನೇಹಿ ಸರಳ ಅಪ್ಲಿಕೇಷನ್ ನಿರ್ಮಾಣಕ್ಕಾಗಿ ಚುನಾವಣಾ ಆಯೋಗಕ್ಕೆ ರಾಷ್ಟ್ರೀಯ ಪ್ರಶಸ್ತಿ ನೀಡಲಾಗಿದೆ. ಇದಲ್ಲದೇ, ಮತದಾರರ ಗುರುತಿನ ಚೀಟಿಯ ಡಿಟಿಟಲ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು, ಚುನಾವಣೆ ಅಕ್ರಮಗಳ ಬಗ್ಗೆ ದೂರು ಸಲ್ಲಿಸುವುದು. ಚುನಾವಣೆಗೆ ಸಂಬಂಧಿಸಿದ ಹೊಸ ಹೊಸ ಸುದ್ದಿ ಮತ್ತು ಮಾಹಿತಿಯನ್ನು ಪಡೆಯಲೂ ಸಹ ಮತದಾರರ ಸಹಾಯವಾಣಿ ಆಪ್ ನೆರವಾಗುತ್ತದೆ.

<><*<><>*><>

ನಾಡಿದ್ದು ಏಪ್ರಿಲ್ ೧ ರಿಂದ ನೂತನ ಆರ್ಥಿಕ ವರ್ಷ ಆರಂಭವಾಗಲಿದೆ. ವಹಿವಾಟು ಕ್ಷೇತ್ರದಲ್ಲಿ ನೂತನ ಪ್ರಕ್ರಿಯೆಗಳು ಕಾರ್ಯಾರಂಭ ಮಾಡಲಿವೆ. ಇದಲ್ಲದೇ ಅನೇಕ ನಿಯಮಗಳಲ್ಲಿ ಮಹತ್ವದ ಬದಲಾವಣೆಯಾಗಲಿವೆ. ಫಾಸ್ಟ್‌ಟ್ಯಾಗ್ ಕೆವೈಸಿ ಅಪ್‌ಡೇಟಿಂಗ್, ಪ್ಯಾನ್-ಆಧಾರ್ ಜೋಡಣೆಗೆ ನೀಡಲಾಗಿದ್ದ ಅವಕಾಶ ನಾಳೆಗೆ ಮುಕ್ತಾಯವಾಗುವುದು. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಫಾಸ್ಟ್‌ಟ್ಯಾಗ್ ಬಳಕೆಗೆ ಕೆವೈಸಿಯನ್ನು ಕಡ್ಡಾಯಗೊಳಿಸಿದೆ. ಏಪ್ರಿಲ್ ೧ ರಿಂದ ಹೆದ್ದಾರಿಗಳಲ್ಲಿ ಬಳಕೆಯಾಗುವ ಫಾಸ್ಟ್‌ಟ್ಯಾಗ್‌ಗಳ ವೈಯಕ್ತಿಕ ಮಾಹಿತಿ ಅಂದರೆ ಕೆವೈಸಿಯನ್ನು ಕಡ್ಡಾಯವಾಗಿ ಅಪ್‌ಡೇಟ್ ಮಾಡಬೇಕಾಗುತ್ತದೆ. ಒಂದು ವೇಳೆ ಈ ನಿಯಮ ಪಾಲನೆಯಾಗದಿದ್ದಲ್ಲಿ ಏಪ್ರಿಲ್ ೧ ರಿಂದ ವಾಹನ ಸವಾರರು ಹೆದ್ದಾರಿಗಳಲ್ಲಿ ಪರದಾಡಬೇಕಾಗುತ್ತದೆ. ಕೆವೈಸಿ ಅಪ್‌ಡೇಟ್ ಆಗಿಲ್ಲದ ಫಾಸ್ಟ್‌ಟ್ಯಾಗ್‌ಗಳನ್ನು ಬ್ಯಾಂಕ್‌ಗಳು ನಿಷ್ಕ್ರಿಯಗೊಳಿಸಲಿದ್ದು, ಫಾಸ್ಟ್‌ಟ್ಯಾಗ್‌ಗಳಲ್ಲಿ ಬ್ಯಾಲೆನ್ಸ್ ಮೊತ್ತ ಇದ್ದರೂ ಸಹ ಟೋಲ್‌ಗಳಲ್ಲಿ ಪರಿಗಣಿಸಲಾಗುವುದಿಲ್ಲ.

<><*<><>*><>

ನಾಳೆ ಮಾರ್ಚ್ ೩೧. ಪ್ರಸಕ್ತ ಆರ್ಥಿಕ ವರ್ಷ ನಾಳೆ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಭಾನುವಾರವಾದರೂ ಎಲ್ಲ ಬ್ಯಾಂಕ್ ಶಾಖೆಗಳು ಮತ್ತು ಜೀವವಿಮಾ ನಿಗಮ-ಎಲ್ಐಸಿ ಕಚೇರಿಗಳು ಕಾರ್ಯನಿರ್ವಹಿಸಲಿವೆ. ಪ್ರಸಕ್ತ ಹಣಕಾಸು ವರ್ಷದ ಕೊನೆಯ ದಿನ ಸರ್ಕಾರದ ಸ್ವೀಕೃತಿ ಮತ್ತು ಪಾವತಿಗಳಿಗೆ ಅನುಕೂಲವಾಗುವಂತೆ ವಹಿವಾಟುಗಳನ್ನು ನಡೆಸಲು ಬ್ಯಾಂಕ್‌ಗಳು ಕರ್ತವ್ಯ ನಿರ್ವಹಿಸಬೇಕೆಂಬ ಸರ್ಕಾರದ ಮನವಿ ಮೇರೆಗೆ ಆರ್‌ಬಿಐ ಈ ಸೂಚನೆ ನೀಡಿತ್ತು.

<><*<><>*><>

ಬಿಹಾರದಲ್ಲಿ ಮುಂಬರುವ ಲೋಕಸಭಾ ಚುನಾವಣೆಗಾಗಿ ಸಿ.ಪಿ.ಐ.ಎಂ.ಎಲ್ ಪಕ್ಷ ತನ್ನ ಉಮೇದುವಾರರನ್ನು ಪ್ರಕಟಿಸಿದೆ. ಅರ ಲೋಕಸಭಾ ಕ್ಷೇತ್ರದಿಂದ ಸುದಾಮ ಪ್ರಸಾದ್ ಮತ್ತು ನಳಂದ ಕ್ಷೇತ್ರದಿಂದ ಸಂದೀಪ್ ಸೌರವ್ ಸ್ಪರ್ಧಿಸಲಿದ್ದಾರೆ. ರಾಜರಾಮ್ ಸಿಂಗ್ ಅವರು, ಕರಕತ್ ಕ್ಷೇತ್ರದಿಂದ  ಕಣಕ್ಕಿಳಿಯಲಿದ್ದಾರೆ ಹಾಗೂ ಎಗಿಯೋನ್ ವಿಧಾನಸಭಾ ಉಪ ಚುನಾವಣೆಗಾಗಿ ಶಿವಪ್ರಕಾಶ್ ರಂಜನ್, ಪಕ್ಷದ ಅಭ್ಯರ್ಥಿಯಾಗಿರುತ್ತಾರೆ ಎಂದು  ಸಿ.ಪಿ.ಐ.ಎಂ.ಎಲ್ ಪಕ್ಷದ ರಾಜ್ಯ ಕಾರ್ಯದರ್ಶಿ ಕುನಾಲ್ ತಿಳಿಸಿದ್ದಾರೆ. ಸಿ.ಪಿ.ಐ.ಎಂ.ಎಲ್ ಪಕ್ಷ ಗ್ರ್ಯಾಂಡ್ ಅಲೈನ್ಸ್ ಜೊತೆ ಸ್ಥಾನ ಹೊಂದಾಣಿಕೆಗಾಗಿ ನಿನ್ನೆ ಒಪ್ಪಂದ ಮಾಡಿಕೊಂಡಿದೆ. ಆರ್‌ಜೆಡಿ ಪಕ್ಷ, ಎಡಪಕ್ಷಗಳಿಗೆ ಒಟ್ಟು ಐದು ಸ್ಥಾನಗಳನ್ನು ನೀಡಲು ಒಪ್ಪಿಕೊಂಡಿದೆ. ಸಿ.ಪಿ.ಐ.ಎಂ ಪಕ್ಷದಿಂದ ಸಂಜಯ್ ಕುಮಾರ್ ಸಿಂಗ್, ಕಗಾರಿಯ ಕ್ಷೇತ್ರದಿಂದ ಸ್ಪರ್ಧಿಸಲಿದ್ದು, ಸಿಪಿಐ ನ ಅವದೇಶ್ ರೈ, ಬೇಗೂಸರೈ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಜಾರ್ಖಂಡ್‌ನಲ್ಲಿಯೂ ಸಿ.ಪಿ.ಐ.ಎಂ.ಎಲ್ ತನ್ನ ಅಭ್ಯರ್ಥಿಯನ್ನು ಪ್ರಕಟಿಸಿದೆ. ಕೊಂಡೆರ್ಮಾ ಕ್ಷೇತ್ರದಿಂದ ವಿನೋದ್ ಸಿಂಗ್ ಸ್ಪರ್ಧಿಸಲಿದ್ದಾರೆ.

<><*<><>*><>

ಕೇಂದ್ರ ಸಚಿವ ಹಾಗೂ ನಾಗಪುರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಿತಿನ್ ಗಡ್ಕರಿ ಅವರು, ಕೇಂದ್ರ ನಾಗ್‌ಪುರದಲ್ಲಿಂದು ಬೃಹತ್ ರೋಡ್ ಶೋ ನಡೆಸಿದರು. ನಾಗ್‌ಪುರ್‌ದಿಂದ ಎರಡು ಬಾರಿ ಬಿಜೆಪಿ ಸಂಸದರಾಗಿರುವ ನಿತಿನ್ ಗಡ್ಕರಿಯವರಿಗೆ ಕಾಂಗ್ರೆಸ್ ಪಕ್ಷದಿಂದ ನಾಗ್‌ಪುರ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಪಶ್ಚಿಮ ನಾಗ್‌ಪುರ್ ಶಾಸಕ ವಿಕಾಸ್ ಠಾಕ್ರೆ ಪ್ರಮುಖ ಪ್ರತಿ ಸ್ಪರ್ಧಿಯಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಒಟ್ಟು ಐದು ಹಂತಗಳಲ್ಲಿ ಮತದಾನ ನಡೆಯಲಿದ್ದು, ನಾಗ್‌ಪುರ್ ಕ್ಷೇತ್ರದಲ್ಲಿ ಮತದಾನ ಏಪ್ರಿಲ್ ೧೯ ರಂದು ನಿಗದಿಯಾಗಿದೆ.

<><*<><>*><>

ಐಎನ್‌ಡಿಐಎ -ಬ್ಲಾಕ್, ನಾಳೆ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಪ್ರಜಾತಂತ್ರ ರಕ್ಷಿಸಿ ರ್‍ಯಾಲಿ ಆಯೋಜಿಸಿದೆ. ಕಾಂಗ್ರೆಸ್, ಎನ್‌ಸಿಪಿ, ಶಿವಸೇನಾ ಯುಬಿಟಿ, ಸಮಾಜವಾದಿ ಪಕ್ಷ, ಆಮ್‌ಆದ್ಮಿ ಪಕ್ಷ, ಆರ್‌ಜೆಡಿ, ಡಿಎಂಕೆ, ನ್ಯಾಷನಲ್ ಕಾನ್ಫರೆನ್ಸ್, ಜಾರ್ಖಂಡ್ ಮುಕ್ತಿ ಮೋರ್ಚಾ, ಎಡಪಕ್ಷಗಳು ಹಾಗೂ ಇನ್ನಿತರ ಪಕ್ಷಗಳ ಧುರೀಣರು ಇದರಲ್ಲಿ ಭಾಗವಹಿಸಲಿದ್ದಾರೆ. ರ್‍ಯಾಲಿ ಕುರಿತಂತೆ ಮಾಹಿತಿ ನೀಡಿದ ಕಾಂಗ್ರೆಸ್ ಧುರೀಣ ಜೈರಾಮ್ ರಮೇಶ್, ಹಣದುಬ್ಬರ ಏರಿಕೆ, ನಿರುದ್ಯೋಗ, ಆರ್ಥಿಕ ಅಸಮಾನತೆ, ರಾಜಕೀಯ ಧ್ರುವೀಕರಣ ಮೊದಲಾದವು ರ್‍ಯಾಲಿಯ ವಿಷಯಗಳಾಗಿವೆ ಎಂದು ತಿಳಿಸಿದ್ದಾರೆ.

<><*<><>*><>

ಲೋಕಸಭೆಯ ಮಾಜಿ ಸ್ಪೀಕರ್ ಶಿವರಾಜ್ ಪಾಟೀಲ್ ಅವರ ಸೊಸೆ ಅರ್ಚನಾ ಪಾಟೀಲ್, ಇಂದು ಭಾರತೀಯ ಜನತಾ ಪಾರ್ಟಿಗೆ ಸೇರ್ಪಡೆಯಾಗದರು. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಚಂದ್ರಶೇಖರ್ ಬವಂಕುಲೆ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು. ಅರ್ಚನಾ ಪಾಟೀಲ್ ಅವರ ಪತಿ ಶೈಲೇಶ್ ಪಾಟೀಲ್ ಅವರು, ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದಾರೆ.

<><*<><>*><>

ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆ ಸಮಿತಿ ಪ್ರಕಟಿಸಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಈ ಬಗ್ಗೆ ಪ್ರಕಟಿಸಿದ್ದಾರೆ. ಹಿರಿಯ ಬಿಜೆಪಿ ಧುರೀಣ ಹಾಗೂ ಕೇಂದ್ರ ಸಚಿವ ರಾಜನಾಥ್ ಸಿಂಗ್ ಸಮಿತಿಯ ಮುಖ್ಯಸ್ಥರಾಗಿದ್ದು, ಇದರಲ್ಲಿ ಒಟ್ಟು ೨೭ ಸದಸ್ಯರು ಇರುತ್ತಾರೆ. ಹಿರಿಯ ಬಿಜೆಪಿ ಧುರೀಣರಾದ ನಿರ್ಮಲಾ ಸೀತಾರಾಮನ್ ಸಂಚಾಲಕರಾಗಿದ್ದು, ಪಿಯುಷ್ ಗೋಯಲ್ ಅವರು, ಸಹ- ಸಂಚಾಲಕರಾಗಿದ್ದಾರೆ.

<><*<><>*><>

ರಾಜಸ್ಥಾನ ಇಂದು ತನ್ನ ೭೫ನೇ ರಾಜ್ಯೋತ್ಸವ ದಿನ ಆಚರಿಸುತ್ತಿದೆ. ಈ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ರಾಜಸ್ಥಾನ ಜನತೆಗೆ ಅಭಿನಂದನೆ ತಿಳಿಸಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ರಾಜ್ಯಪಾಲ ಕಾಲ್‌ರಾಜ್ ಮಿಶ್ರಾ ಮತ್ತು ಮುಖ್ಯಮಂತ್ರಿ ಭಜನ್‌ಲಾಲ್ ಜನತೆಗ ಶುಭಾಶಯ ಕೋರಿದ್ದಾರೆ.

<><*<><>*><>

ರಾಜಧಾನಿ ಸಿಮ್ಲಾ ಸೇರಿದಂತೆ ಹಿಮಾಚಲ ಪ್ರದೇಶದ ಎತ್ತರ ಪ್ರದೇಶಗಳಲ್ಲಿ ನಿನ್ನೆ ರಾತ್ರಿಯಿಂದ ಸತತ ಮಳೆ ಹಾಗೂ ಹಿಮಪಾತವಾಗುತ್ತಿದೆ. ಕಿನ್ನೂರು, ಕುಲ್ಲು, ಚಂಬಾ, ಕಾಂಗ್ರಾ, ಸೀಮ್ಲಾ ಮತ್ತು ಲಹುಲ್ -ಸ್ಪಿತಿ ಪರ್ವತಗಳು ಹಿಮಾಚ್ಛಾದಿತವಾಗಿದೆ. ಕೆಲಾಂಗ್ ೩ ಇಂಚು, ಕೋಕ್ಸರ್ ೫ ಇಂಚು ಹಾಗೂ ರೋಹತಂಗ್ ಮತ್ತು ಬರಾಲಚ ಪಾಸ್‌ಗಳಲ್ಲಿ ೮ ಇಂಚು ಹಿಮ ಬಿದ್ದಿದೆ. ಇದರಿಂದಾಗಿ ಕಣಿವೆಯಲ್ಲಿ ಸಂಚಾರಕ್ಕೆ ವ್ಯಾಪಕ ವ್ಯತ್ಯಯ ಉಂಟಾಗಿದೆ.

<><*<><>*><>

ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಲಖನೌ ಸೂಪರ್ ಜೈಂಟ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಪರಸ್ಪರ ಮುಖಾಮುಖಿಯಾಗಿವೆ. ಟಾಸ್ ಗೆದ್ದ ಲಖನೌ ಸೂಪರ್ ಜೈಂಟ್ಸ್ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.